ದಿನಾಂಕಃ **07-10-2021** ರ ಅದೇಶದ ಮೇರೆಗೆ ಸಾಕ್ಷಿಯನ್ನು ಪುನಃ ದಿನಾಂಕಃ **04-01-2022** ರಂದು ಕರೆಯಿಸಿ ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು **1** ನೇ ಪ್ರತಿವಾದಿಪರ ಶ್ರೀ ಎಸ್.ಎನ್. ಕೆ ವಕೀಲರಿಂದಃ

ನಿಪಿ-**1** ನ್ನು ನನ್ನ ಸಹೋದರ ನಾಗರಾಜು ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಿಪಿ-**5**(ಬಿ) ಕಂದಾಯ ರಶೀದಿ ಪ್ರಕಾರ ಸಾವಿತ್ರಮ್ಮ ಇವರ ಹೆಸರಿನಿಂದ ದಿನಾಂಕಃ **05-05-2014** ರಂದು ಕಂದಾಯ ಕಟ್ಟಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-**5**(ಎ) ಮತ್ತು **5** (ಸಿ)ರಲ್ಲಿ ನನ್ನ ಹೆಸರು ನಮೂದಿಸಲಾಗಿರುತ್ತದೆ ಎಂದರೆ ಸರಿ. ನಿಪಿ-**12** ರಲ್ಲಿ ದಿನಾಂಕಃ **07-03-2011** ರ ಬದಲಿಗೆ ದಿನಾಂಕಃ **07-05-2011** ಎಂದು ತ್ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ . ನಿಪಿ-**9** ರಲ್ಲೂ ಸಹ ದಿನಾಂಕವನ್ನು ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**9** ರ ದೂರಿನಲ್ಲಿ ಸಿಮೆಂಟ್ ಅಂಗಡಿಯವರನ್ನು ಸಹ ಅದರಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ. ನಿಪಿ-**10** ರ ದೂರಿನಲ್ಲಿ ಗೋಡೆ ಕಟ್ಟಿದ ವಿಚಾರದ ಬಗ್ಗೆ ಹೇಳಿಲ್ಲ ಎಂದರೆ ಸರಿ. ನಿಪಿ-**20** ಫೋಟೋದಲ್ಲಿ ತೋರಿಸಿರುವ ಆಸ್ತಿಯ ಪಕ್ಕ ನನ್ನ ಅಣ್ಣನ ಆಸ್ತಿ ಇರುತ್ತದೆ ಎಂದರೇ ನನಗೆ ಗೊತ್ತಿಲ್ಲ. ನನ್ನ ವಾದಪತ್ರದಲ್ಲಿ ನಮೂದಿಸಿರುವ ಚಕ್ಕುಬಂಧಿ ಸರಿಯಿರುತ್ತದೆ. ನಾನು ಬ್ಯಾಂಕಿಗೆ ನೀಡಿದ ಅಡಮಾನ ಪತ್ರದಲ್ಲಿ ಪೂರ್ವಕ್ಕೆ - ಕಪೌಂಡ್. ಪಶ್ಚಿಮಕ್ಕೆ - ಅನಿಲ ರವರ ಮನೆ. ಉತ್ತರಕ್ಕೆ- ವೇಂಕಟೇಶ ರವರ ಜಾಗ. ದಕ್ಷಿಣಕ್ಕೆ- ಪ್ರತಿವಾದಿ ಗಂಡ ರಾಚಯ್ಯ ರವರ ಆಸ್ತಿ ಯೆಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ವಾದಪತ್ರ ಮತ್ತು ಬ್ಯಾಂಕಿಗೆ ನೀಡಿದ ಅಡಮಾನ ಪತ್ರದಲ್ಲಿಯ ಚೆಕ್ಕು ಬಂದಿ ವ್ಯತ್ಯಾಸ_ಇರುತ್ತದೆ ಎಂದರೆ ಸರಿ. ನನ್ನ ಸಹೋದರ ನಾಗರಾಜು ಮತ್ತು ಪ್ರತಿವಾದಿ ಸಾವಿತ್ರಮ್ಮ ಇವರ ನಡುವೆ ಆಸ್ತಿ ವಿಚಾರವಾಗಿ ಗಲಾಟೆ ನಡೆಯುತ್ತಿದೆ ಎಂದರೆ ಸರಿ. ನಾನು ನನ್ನ ಸಹೋದರ ನಾಗರಾಜು

ರವರ ಚೀತಾವಣೆಯಿಂದ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ದಾವೆ ದಾಖಲುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮನೆಯ ಮುಂಭಾಗದ 5 ಅಡಿ ಅಂತರದಲ್ಲಿ ಕಾಂಕ್ರಿಟ್ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಈಗ ದೇವರಾಜಯ್ಯ ಎಂಬುವವರ ಆಸ್ತಿಯ ಮುಖಾಂತರ ನನ್ನ ಮನೆಗೆ ಓಡಾಡುತ್ತಿದ್ದೇನೆ. ನಮ್ಮ ಮತ್ತು ದೇವರಾಜ ರವರ ಮನೆಯ ನಡುವೆ 5 ಅಡಿ ಅಂತರವಿರುತ್ತದೆ. ದೇವರಾಜ ರವರ ಮನೆಯಿಂದ ಸಾವಿತ್ರಮ್ಮ ರವರ ಮನೆ ಎಷ್ಟು ಅಂತರದಲ್ಲಿ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ವಿಜಯಾ ಬ್ಯಾಂಕ್ ನಿಂದ ಸ್ವಲ್ಪ ದೂರು ಹೋದರೆ ಬಲಗಡೆ ನನಗೆ ಓಡಾಡಲು ರಸ್ತೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಅವರ ಆಸ್ತಿಯಲ್ಲಿ ಮಳಿಗೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ 10 ಅಡಿ ಓಡಾಡಲು ಜಾಗ ಬಿಟ್ಟಿದ್ದರು ಎಂದು ನುಡಿಯುತ್ತಾರೆ. ಅಲ್ಲಿ ಯಾವುದೇ 10 ಅಡಿ ಜಾಗ ಇರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಇದ್ದ 10 ಅಡಿ ಜಾಗ ಪ್ರತಿವಾದಿಗೆ ಸಂಬಂದಿಸಿದ್ದು ಎಂದರೆ ಸರಿಯಲ್ಲ. ನಾವು ಮನೆ ಕಟ್ಟುವ ಸಮಯದಲ್ಲಿ ಸಿಮೆಂಟ್ ಮತ್ತು ಜಲ್ಲಿ ಇತ್ಯಾದಿ ವಸ್ತುಗಳನ್ನು ತೆಗೆದುಕೊಂಡು ಲಾರಿ ಈಗ ಸಿಮೆಂಟ್ ಅಂಗಡಿ ಕಟ್ಟಿರುವ ಜಾಗದಿಂದ ಓಡಾಡುತ್ತಿತ್ತು. ನಮಗೆ ಓಡಾಡಲು ಜಾಗ ಇದ್ದರೂ ಸಹ ನನ್ನ ಸಹೋದರ ನಾಗರಾಜು ಚಿತಾವಣೆಯಿಂದ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆ ದಾಖಲುಪಡಿಸಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಗಲ್ಲಿಯಿರುವುದಿಲ್ಲ ಅದು ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ದಾವೆಗೆ ಅನುಕೂಲವಾಗುವಂತೆ ಸೃಷಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಫೋಟೋಗಳನ್ನು ನಮಗೆ ಅನೂಕೂಲವಾಗುವಂತೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.